# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 243 | Pages. 2 | Date: 09-08-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 243 - ಪುಟಗಳು : 2 09-08-2025 ಶನಿವಾರ Ph: 8762954248 ದರ : ₹1


# ಬಂಜರು ಭೂಮಿಯಲ್ಲಿ 'ದೇಗುಲ' ಜಟಾಪಟಿ

## ಮುದಿಬೆಟ್ಟ ಕಾವಲಿನಲ್ಲಿ ಹೈಡ್ರಾಮಾ | ಕಾಮಗಾರಿ ನಿಲ್ಲಿಸುವಂತೆ ತಹಶೀಲ್ದಾರ್ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಮುದಿಬೆಟ್ಟ ಕಾವಲು ಗ್ರಾಮದ ಸರ್ವೆ ನಂ. 118ರ 12 ಎಕರೆ 5 ಗುಂಟೆ ಸರ್ಕಾರಿ ಬಂಜರು ಭೂಮಿಯನ್ನು ಧಾರ್ಮಿಕ ಹಾಗೂ ಜಾನುವಾರುಗಳ ಮೇವಿಗಾಗಿ ಗೋಮಾಳವೆಂದು ಮೀಸಲಿಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದರಿಂದ ಶುಕ್ರವಾರ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಗ್ರಾಮದ ಸರ್ವೆ ನಂ. 118ರಲ್ಲಿ ದೊಡ್ಡ ಬಂಡೆ ಸುತ್ತಲು 12.5 ಎಕರೆ ಬಂಜರು ಭೂಮಿ ಇದ್ದು ಬಂಡೆಯ ಮೇಲೆ ಶ್ರೀ ಆಂಜನೇಯಸ್ವಾಮಿ ದೇಗುಲ ನಿರ್ಮಿಸಲು ಗ್ರಾಮಸ್ಥರು ಸಿದ್ಧತೆ ಮಾಡಿಕೊಂಡಿದ್ದರು. ವಿಚಾರ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಬಿ.ಎಸ್. ಶಂಕರಪ್ಪ ಪರಿಶೀಲಿಸಿದರು. ಈ ವೇಳೆ ತಹಶೀಲ್ದಾರ್ ಹಾಗೂ ಗ್ರಾಮಸ್ಥರ ನಡುವೆ ಮಾತಿನ ಚಕಮಕಿ ನಡೆಯಿತು. ತಹಶೀಲ್ದಾರ್ ಅವರು ಗ್ರಾಮಸ್ಥರಿಗೆ ಸಾಕಷ್ಟು ತಿಳಿ ಹೇಳಿದರು. ಹಿರೀಸಾವೆ ಪೊಲೀಸರು ಮಧ್ಯೆ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು. ಕೆಲಹೊತ್ತು ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಭಾರೀ ಹೈಡ್ರಾಮಾ ಸೃಷ್ಟಿಯಾಗಿತ್ತು.

### ಗ್ರಾಮಸ್ಥರ ಅಳಲು

ನಮ್ಮೂರು ಮುದಿಬೆಟ್ಟ ಕಾವಲು ನೂರಾರು ವರ್ಷಗಳಿಂದ ಹುಲ್ಲುಗಾವಲು ಪ್ರದೇಶವಾಗಿದ್ದು ಜಾನುವಾರುಗಳ ಮೇವಿಗೆ ಆಶ್ರಯವಾಗಿದೆ. ಇತ್ತೀಚಿನ ದಿನಗಳಲ್ಲಿ ಹುಲ್ಲುಗಾವಲು ಪ್ರದೇಶವು ಕೃಷಿ ಜಮೀನಾಗಿ ಪರಿವರ್ತನೆಗೊಂಡಿದ್ದು ಜಾನುವಾರುಗಳ ಮೇವಿಗೆ ಗೋಮಾಳವೇ ಇಲ್ಲವಾಗುತ್ತಿದೆ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದರು.

ಮುದಿಬೆಟ್ಟ ಕಾವಲು, ಉಳ್ಳಾವಳ್ಳಿ, ಹೊಸಹಳ್ಳಿ, ಹೊನ್ನಶೆಟ್ಟಿಹಳ್ಳಿ, ಬೆಂಡೆಕೆರೆ,



ಮೆಳ್ಳಹಳ್ಳಿ, ಗೌಡರಹಳ್ಳಿ ಸೇರಿ ಹತ್ತಾರು ಹಳ್ಳಿಗಳು ಈ ವ್ಯಾಪ್ತಿಗೆ ಒಳಪಡಲಿದ್ದು ಸದ್ಯ ಸರ್ವೆ ನಂ. 118ರ 12.5 ಎಕರೆ ಪ್ರದೇಶ ಮಾತ್ರ ಉಳಿದಿದೆ. ಈ ಪ್ರದೇಶವನ್ನು ಸಾರ್ವಜನಿಕರ ಹಿತಾಸಕ್ತಿ ಸಲುವಾಗಿ ಉಳಿಸಿಕೊಡಿ ಎಂದು ತಹಶೀಲ್ದಾರ್ ಅವರಿಗೆ ಸ್ಥಳೀಯರು ಮನವಿ ಮಾಡಿದರು.

ನೂರಾರು ವರ್ಷಗಳಿಂದ ಈ ಬಂಡೆಯ ಮೇಲೆ ಶ್ರೀ ಮುದಿಬೆಟ್ಟದ ಆಂಜನೇಯ ಸ್ವಾಮಿಯ ಚಿಕ್ಕ ಗುಡಿ ಕಟ್ಟಿಕೊಂಡು ದನ-ಕುರಿ ಮೇಯಿಸುವವರು ಪೂಜಿಸುತ್ತಿದ್ದರು. ಅದನ್ನು ನಾವು ಮುಂದುವರಿಸಿಕೊಂಡು ಬಂದಿದ್ದೇವೆ. ಇತ್ತೀಚಿನ ದಿನಗಳಲ್ಲಿ ಚಿಕ್ಕ ಗುಡಿ ಹಾಳಾಗಿರುವುದರಿಂದ ತೆರವುಗೊಳಿಸಿ ದೇಗುಲ ನಿರ್ಮಿಸಲು ಮುಂದಾಗಿದ್ದೇವೆ. ದಯವಿಟ್ಟು ನಿರ್ಮಿಸಲು ಅವಕಾಶ ಕಲ್ಪಿಸಿಕೊಡಿ ಎಂದು ಮಹಿಳೆಯರು ಕೇಳಿಕೊಂಡರು. ತಹಶೀಲ್ದಾರ್ ಬಿ.ಎಸ್. ಶಂಕರಪ್ಪ ಮಾತನಾಡಿ, ಈ ಜಾಗವು ಸರ್ಕಾರಿ ಬಂಜರು ಭೂಮಿಯಾಗಿದ್ದು ರಕ್ಷಿಸುವುದು ನಮ್ಮ ಕರ್ತವ್ಯ. ದೇಗುಲ ಹಾಗು ಇತರ ಕಾಮಗಾರಿಗಾಗಿ ಭೂಮಿ ದುರುಪಯೋಗ ಮಾಡಿಕೊಳ್ಳಬಾರದು. ಅಗತ್ಯ ದಾಖಲಾತಿಗಳನ್ನು ಒದಗಿಸಿ ಸರ್ಕಾರದಿಂದ ಅನುಮತಿ ಪಡೆಯಬೇಕು. ಅಲ್ಲಿಯವರೆಗೂ ಯಾವುದೇ ಕೆಲಸ ಮಾಡಬಾರದೆಂದು ಸೂಚನೆ ನೀಡಿದರು.

### ದೇಗುಲಕ್ಕೆ ದೇಣಿಗೆ ಸಂಗ್ರಹ

ಮುದಿಬೆಟ್ಟ ಕಾವಲು ಬಂಡೆಯ ಮೇಲೆ ಈಗಾಗಲೆ ದೇಗುಲ ನಿರ್ಮಾಣಕ್ಕೆ ತಳಹದಿ ನಿರ್ಮಿಸಲಾಗಿದ್ದು ನೀರಿನ ತೊಟ್ಟಿ, ವಿದ್ಯುತ್ ವ್ಯವಸ್ಥೆ ಮಾಡಲಾಗಿದೆ. ಕಲ್ಲು, ಜಲ್ಲಿ, ಎಂ-ಸ್ಯಾಂಡ್ ಎಲ್ಲವನ್ನು ಶೇಖರಿಸಲಾಗಿದೆ. ಆ. 13 ರಿಂದ ಆ.17ರ ವರಗೆ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಲ್ಲದೆ ದೇಗುಲ ನಿರ್ಮಾಣಕ್ಕೆ ಸುತ್ತಮುತ್ತಲ ಗ್ರಾಮಸ್ಥರಿಂದ ದೇಣಿಗೆ ಸಂಗ್ರಹಿಸಲಾಗಿದೆ ಎಂದು ವಿಷಕಂಠೇಗೌಡ ತಿಳಿಸಿದರು.

ಚನ್ನರಾಯಪಟ್ಟಣ ಪಿಎಸ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎನ್.ಟಿ. ಬೊಮ್ಮೇಗೌಡ, ದಿಡಗ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎನ್.ಆರ್. ರತ್ನರಾಜ್, ಮಾಜಿ ಸದಸ್ಯ ಡಿ.ಬಿ. ವೆಂಕಟೇಶ್, ದಿಡಗ ಸೊಸೈಟಿ ಮಾಜಿ ಅಧ್ಯಕ್ಷ ಹೆಚ್.ಕೆ. ಯೋಗೇಶ್, ನಿರ್ದೇಶಕ ಹೆಚ್.ಎಸ್. ಮಹೇಶ್, ಬಾಳಗಂಚಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜೇಗೌಡ, ಗಂಗಾಧರ್, ಮಾಜಿ ಸದಸ್ಯ ಹೊನ್ನಶೆಟ್ಟಿಹಳ್ಳಿ ಮಂಜೇಗೌಡ, ಗ್ರಾಮಸ್ಥರಾದ ಹೆಚ್.ಆರ್. ಗಣೇಶ್‌ಗೌಡ, ಹೆಚ್.ಆರ್. ಮಹೇಶ್, ವೆಂಕಟೇಶ್ ಗೌಡ, ಜಗನ್ನಾಥ್, ಸುನೀಲ್, ಶ್ರೀನಿವಾಸ್, ಲೋಕೇಶ್, ಮಂಜು, ತಾಯಮ್ಮ, ವಿಜಯಲಕ್ಷ್ಮೀ, ರೂಪ, ಸೀಮ, ಸುನಂದಮ್ಮ, ಲತಾ, ಸಂಗೀತಾ ಇತರರಿದ್ದರು. ಹಿರೀಸಾವೆ ಸಿಪಿಐ ಸಂತೋಷ್ ಹಾಗು ಪಿಎಸ್‌ಐ ರೂಪ ಬೀರಾದಾರ ನೇತೃತ್ವದಲ್ಲಿ ಭದ್ರತೆ ಕೈಗೊಳ್ಳಲಾಗಿತ್ತು.

# ಒತ್ತುವರಿ ತೆರವು ಕಾರ್ಯಾಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಯಸಳೂರು ಅರಣ್ಯ ವಲಯ ವ್ಯಾಪ್ತಿಯಲ್ಲಿ ಅರಣ್ಯಾಧಿಕಾರಿ ಹಾಗೂ ಸಿಬ್ಬಂದಿ ಒತ್ತುವರಿ ತೆರವು ಕಾರ್ಯಾಚರಣೆ ಕೈಗೊಂಡಿದ್ದು ಸ್ಥಳೀಯರು ಆತಂಕಕ್ಕೆ ಒಳಗಾಗಿದ್ದಾರೆ.

ಸಹಾಯಕ ಅರಣ್ಯಾಧಿಕಾರಿ ಮಧು ಸೂದನ್ ಅವರ ಮಾರ್ಗದರ್ಶನದಲ್ಲಿ ಯಸಳೂರು ವಲಯ ಅರಣ್ಯಾಧಿಕಾರಿ ಎಸ್.ಆರ್. ಕೃಷ್ಣ ನೇತೃತ್ವದಲ್ಲಿ ಹೋಬಳಿಯ ಕೊತ್ತನಹಳ್ಳಿ ಅಕೇಷಿಯಾ ನೆಡುತೋಪಿನಲ್ಲಿ ಎಡಕೇರಿ ಗ್ರಾಮದ ವೈ.ಟಿ. ಪಾರ್ವತಮ್ಮ ಮತ್ತು ವೈ.ಎಂ. ನಾಗರಾಜು ಎಂಬುವರು ಸುಮಾರು 30 ಎಕರೆ ಅರಣ್ಯ ಪ್ರದೇಶದಲ್ಲಿ 12 ಎಕರೆಗೂ ಹೆಚ್ಚು ಜಾಗದಲ್ಲಿ ಬೇಲಿ ಮಾಡಿ ಒತ್ತುವರಿ ಮಾಡಿರುವ ಆರೋಪದ ಹಿನ್ನಲೆಯಲ್ಲಿ ಶುಕ್ರವಾರ ಬೆಳಿಗ್ಗೆ 11 ಗಂಟೆಯ ವೇಳೆಗೆ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಒತ್ತುವರಿ ತೆರವುಗೊಳಿಸಿದ್ದಾರೆ.

ಕೆಲವು ವಾರಗಳ ಹಿಂದೆ ಯಸಳೂರು ವಲಯ ಅರಣ್ಯಾಧಿಕಾರಿ ಕೃಷ್ಣ ಅವರು ಮರಡಿಕೆರೆ ಗ್ರಾಮದ ಸರ್ವೆ ನಂ. 361/1ರಲ್ಲಿ ಪ್ರಿಯಾ ಎಂಬ ದಲಿತ ಮಹಿಳೆ ಅರಣ್ಯ ಪ್ರದೇಶದಲ್ಲಿ ಮನೆಯನ್ನು ಕಟ್ಟಿದ್ದಾರೆಂಬ ಆರೋಪದ ಮೇಲೆ ಮನೆ ತೆರವುಗೊಳಿಸಿದ್ದರು. ಮತ್ತೆ ತೆರವು ಕಾರ್ಯಾಚರಣೆ ಮುಂದುವರೆದಿದ್ದು ಮಲೆನಾಡಿಗರ ಆಕ್ರೋಶಕ್ಕೆ ಕಾರಣವಾಗಿದೆ.

# ಜಿಲ್ಲಾದ್ಯಂತ ಸಂಭ್ರಮದ ವರಮಹಾಲಕ್ಷ್ಮಿ ಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲಾದ್ಯಂತ ಶುಕ್ರವಾರ ವರಮಹಾಲಕ್ಷ್ಮಿ ಹಬ್ಬವನ್ನು ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಮಹಿಳೆಯರು ಒಟ್ಟಾಗಿ ಪೂಜೆ ಪುನಸ್ಕಾರದಲ್ಲಿ ಭಾಗವಹಿಸುವ ಅಪರೂಪದ ಹಬ್ಬ ಇದಾಗಿದ್ದು ಮನೆಗಳಲ್ಲಿ ವಿಶೇಷ ಧಾರ್ಮಿಕ ಕೈಂಕರ್ಯ ನೆರವೇರಿದವು. ಮಹಾಲಕ್ಷ್ಮಿಗೆ ಮುಖವಾಡ ಹಾಕಿ ಶೃಂಗಾರ ಮಾಡಿ ದೇವಿಗೆ ಮಡಿ ಸೀರೆ, ಹೂವಿನಿಂದ ಅಲಂಕರಿಸಲಾಯಿತು. ವಿವಿಧ ಬಗೆಯ ಖಾದ್ಯ ತಯಾರಿಸಿ ಲಕ್ಷ್ಮಿದೇವಿಗೆ ನೈವೇದ್ಯ ಸಲ್ಲಿಸಲಾಯಿತು. ಲಕ್ಷ್ಮೀ ವ್ರತ, ಪಾರಾಯಣ ಮಾಡಲಾಯಿತು.

### ಚನ್ನರಾಯಪಟ್ಟಣ ವರದಿ:

ಮಹಿಳೆಯರು ಹಿಂದಿನ ದಿನವೇ ಮನೆಯನ್ನು ಸ್ವಚ್ಛಗೊಳಿಸಿ ಸಿಹಿ ತಿಂಡಿ-ತಿನಿಸುಗಳನ್ನು ಸಿದ್ಧಪಡಿಸಿಕೊಂಡಿದ್ದರು. ರಾತ್ರಿಯಿಡಿ ಹಬ್ಬದ ಕೆಲಸದಲ್ಲಿ ತೊಡಗಿಕೊಂಡು ದೇವರ ಮನೆ ಹಾಗೂ ದೇವಿಯ ಅಲಂಕಾರ ಮಾಡಿಕೊಂಡರು.



ಪ್ರತಿ ಮನೆಗಳಲ್ಲಿಯೂ ಮನೆ ಬಾಗಿಲಿಗೆ ತಳಿರು-ತೋರಣ ಕಟ್ಟಲಾಗಿದ್ದು ದೇವರ ಕೋಣೆಯಲ್ಲಿ ಕಬ್ಬು, ಬಾಳೆ ಕಂದು ಕಟ್ಟಿ ಮಾವಿನ ತೋರಣ ಹಾಗೂ ಹೂವಿನಿಂದ ಅಲಂಕರಿಸಲಾಗಿತ್ತು. ಕಳಸವನ್ನು ಸೀರೆಯಿಂದ ಸಿಂಗರಿಸಿ ವರಮಹಾಲಕ್ಷ್ಮೀ ದೇವಿಯ ಮುಖವಾಡ ಅಳವಡಿಸಿ ಒಡವೆ ಹಾಗೂ ವಿವಿಧ ಬಗೆಯ ಪುಷ್ಪಗಳಿಂದ ಅಲಂಕರಿಸಲಾಗಿತ್ತು.

ಮುಂಜಾನೆಯೇ ಪೂಜೆ ಆರಂಭಿಸಿಕೊಂಡು ವಿವಿಧ ಬಗೆಯ ಹಣ್ಣುಗಳು, ಸಿಹಿ ತಿಂಡಿಗಳನ್ನು ಜೋಡಿಸಿಟ್ಟು ಕುಟುಂಬದೊಂದಿಗೆ ವಿಶೇಷ ಪೂಜೆ ಸಲ್ಲಿಸಿ ವ್ರತ ನೆರವೇರಿಸಿದರು. ಮಹಿಳೆಯರು ಸಾಂಪ್ರದಾಯಿಕ ಉಡುಗೆ ತೊಟ್ಟು ಮನೆ ಮನೆಗೆ ತೆರಳಿ ಅರಿಶಿಣ-ಕುಂಕುಮ ಪಡೆದು ಶುಭಾಶಯ ವಿನಿಮಯ ಮಾಡಿಕೊಂಡರು. ಸಿಹಿ ಹಂಚಿ ಸಂಭ್ರಮಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕುಸುಮಾ ಬಾಲಕೃಷ್ಣ ಅವರು ತಮ್ಮ ಮನೆಯಲ್ಲಿ ವರಮಹಾಲಕ್ಷ್ಮೀ ವ್ರತ ನೆರವೇರಿಸಿ ಹತ್ತಾರು ಮಹಿಳೆಯರಿಗೆ ಅರಿಶಿಣ-ಕುಂಕುಮ, ರವಿಕೆ ಕಣ ಹಾಗೂ ಹಸಿರು ಬಳೆ ನೀಡಿ ಶುಭ ಕೋರಿದರು.

ಬಳಿಕ ಅವರು ಮಾತನಾಡಿ, ವರಮಹಾಲಕ್ಷ್ಮೀ, ಧನಲಕ್ಷ್ಮೀ ಹಾಗೂ ಗೌರಿ ಪೂಜೆಯು ಮಹಿಳೆಯರಿಗೆ ವಿಶೇಷ ವ್ರತವಾಗಿದ್ದು ತನ್ನ ಕುಟುಂಬಕ್ಕೆ ಒಳಿತನ್ನು ಭೇಡಿಕೊಳ್ಳುವುದರ ಜತೆಗೆ ಸ್ನೇಹಿತರು ಹಾಗೂ ಸಂಬಂಧಿಕರಿಗೆ ಶುಭವನ್ನು ಬಯಸುವ ಆಚರಣೆಯಾಗಿರುತ್ತದೆ ಎಂದರು.

ಮನೆ ಕೆಲಸ, ಮಕ್ಕಳ ಜವಾಬ್ದಾರಿ, ಕೃಷಿ ಚಟುವಟಿಕೆ ಹಾಗೂ ಪ್ರತಿಯೊಂದು ಜವಾಬ್ದಾರಿಗಳನ್ನು ಹೊತ್ತು ನಿರ್ವಹಿಸುವ ಮಹಿಳೆಯರಿಗೆ ಹಬ್ಬ-ಹರಿದಿನಗಳಲ್ಲಿ ತೊಡಗುವುದು ಒಂದು ವಿಶೇಷ ಸಂಗತಿಯಾಗಿದೆ. ಇದರಿಂದ ಮಹಿಳೆಯರ ಹಾಗೂ ಮನೆಯವರ ಮನಸ್ಸಿಗೆ ನೆಮ್ಮದಿ, ಶಾಂತಿ ಹಾಗೂ ತೃಪ್ತಿ ಸಿಗಲಿದೆ ಎಂದು ತಿಳಿಸಿದರು.

ಶಾಸಕ ಸಿ.ಎನ್.ಬಾಲಕೃಷ್ಣ, ಪುತ್ರ ಜೈದೀಪ್ ಗೌಡ, ಪುತ್ರಿ ನಕ್ಷತ್ರ, ಬಾಲು ಹಾಗೂ ಸ್ನೇಹಿತರು ಪಾಲ್ಗೊಂಡಿದ್ದರು.

# ಪ್ರಜ್ವಲ್‌ಗೆ ಜೀವಾವಧಿ ಶಿಕ್ಷೆ ಪ್ರಶ್ನಿಸಿ ಮೇಲ್ಮನವಿಗೆ ಚಿಂತನೆ: ಶಾಸಕ ಬಾಲಕೃಷ್ಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಜೀವಾವಧಿ ಶಿಕ್ಷೆ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವ ಕುರಿತು ಕುಟುಂಬದಲ್ಲಿ ಚರ್ಚೆ ನಡೆದಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿ, ಪ್ರಜ್ವಲ್ ರೇವಣ್ಣ ದೋಷಿ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ನೀಡಿದ್ದು ಕಾನೂನಿಗೆ ಎಲ್ಲರೂ ತಲೆಬಾಗಬೇಕು. ತೀರ್ಪು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಮುಂದಿನ ಕಾನೂನು ಹೋರಾಟದ ಬಗ್ಗೆ ಚರ್ಚೆ ನಡೆಯುತ್ತಿವೆ. ಏನಾಗುತ್ತದೆಂಬುದನ್ನು ಕಾದು ನೋಡೋಣ ಎಂದರು.

### ಧರ್ಮಸ್ಥಳಕ್ಕೆ ಧಕ್ಕೆ

ಧರ್ಮಸ್ಥಳದಲ್ಲಿ ನಡೆಯುತ್ತಿರುವ ತಲೆಬುರುಡೆ ಉತ್ಖನನ ಪ್ರಕ್ರಿಯೆಯಿಂದ ಕೋಟ್ಯಂತರ ಹಿಂದುಗಳ ಭಾವನೆಗೆ



ನೋವುಂಟಾಗಿದೆ. ಎಸ್‌ಐಟಿ ತನಿಖೆಯಿಂದ ಶ್ರೀ ಕ್ಷೇತ್ರಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕು ಎಂದು ಹೇಳಿದರು.

ಧರ್ಮಸ್ಥಳದ ಬಗ್ಗೆ ಕೋಟ್ಯಂತರ ಜನರಿಗೆ ಭಕ್ತಿ, ನಂಬಿಕೆ ಮತ್ತು ಗೌರವವಿದೆ. ಇತ್ತೀಚಿನ ಬೆಳವಣಿಗೆಗಳು ಹಿಂದು ಭಾವನೆಗಳಿಗೆ ಧಕ್ಕೆ ತರುತ್ತಿವೆ. ಈ ತನಿಖೆಯಿಂದ ಕೇವಲ ಚರ್ಚೆ ಉಂಟಾಗಬಾರದು, ಶೀಘ್ರವಾಗಿ ಮಾಹಿತಿ ನೀಡಬೇಕು. ಯಾವುದೇ ದುರುದ್ದೇಶದಿಂದ ತನಿಖೆ ನಡೆಯಬಾರದು ಎಂದು ಒತ್ತಾಯಿಸಿದರು.

ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರ ಸಾರಥ್ಯದಲ್ಲಿ ಧಾರ್ಮಿಕ ಚಟುವಟಿಕೆಗಳು, ಗ್ರಾಮೀಣಾಭಿವೃದ್ಧಿ ಯೋಜನೆಗಳು, ಹೈನುಗಾರಿಕೆ, ರೈತಾಪಿ ವರ್ಗ ಮತ್ತು ಕೂಲಿ ಕಾರ್ಮಿಕರಿಗೆ ಸಹಾಯ ಮಾಡುವ ಮೂಲಕ ರಾಷ್ಟ್ರಕ್ಕೆ ಶಕ್ತಿ ತುಂಬಿದೆ. ಧರ್ಮಸ್ಥಳಕ್ಕೆ ತನ್ನದೇ ಆದ ಗೌರವವಿದೆ, ಇದು ದೇಶ ಮತ್ತು ಪ್ರಪಂಚಕ್ಕೆ ಗೊತ್ತಿದೆ. ಇತ್ತೀಚಿನ ಗಲಾಟೆ ಮತ್ತು ಗದ್ದಲಗಳು ಭಕ್ತರ ಭಾವನೆಗಳಿಗೆ ಧಕ್ಕೆ ತರುತ್ತಿವೆ ಎಂದರು.

ಪ್ರಸ್ತುತ ಸರ್ಕಾರದಲ್ಲಿ ಶಾಸಕರಿಗೆ ಅನುದಾನ ಸಿಗದೆ ಅಭಿವೃದ್ಧಿ ಕಾಮಗಾರಿಗೆ ಭಾರೀ ಹೊಡೆತ ಬಿದ್ದಿದೆ. ಶ್ರವಣಬೆಳಗೊಳ ಕ್ಷೇತ್ರಕ್ಕೆ ಸೂಕ್ತ ಅನುದಾನ ಬಂದಿಲ್ಲ. ಕಾಂಗ್ರೆಸ್ ಶಾಸಕರಿಗೆ 50 ಕೋಟಿ ರೂ. ಬೇರೆ ಪಕ್ಷದವರಿಗೆ 25 ಕೋಟಿ ರೂ. ಕೊಡುತ್ತೇವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಆದರೆ ಇಲ್ಲಿವರೆಗೆ ಒಂದು ರೂಪಾಯಿ ಬಿಡುಗಡೆ ಆಗಿಲ್ಲ. ರಸ್ತೆಗಳೆಲ್ಲಾ ಕೆಸರು ಗದ್ದೆಯಾಗಿವೆ, ಗುಂಡಿ ಮುಚ್ಚಲು ಸಾಧ್ಯವಾಗಿಲ್ಲ. ಜನರ ಬೇಡಿಕೆಗೆ ಸ್ಪಂದಿಸಲು ಆಗುತ್ತಿಲ್ಲವೆಂದು ಬಾಲಕೃಷ್ಣ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕರು ಅನುದಾನಕ್ಕಾಗಿ ಭಿಕ್ಷೆ ಬೇಡುವ ಪರಿಸ್ಥಿತಿಗೆ ತರಬಾರದು. ಎಲ್ಲಾ ಪಕ್ಷದ ಮತದಾರರಿರುವ ನಮ್ಮ ಕ್ಷೇತ್ರದ ಗೌರವವನ್ನು ಉಳಿಸಿಕೊಳ್ಳಲು ಸರ್ಕಾರ ಸಹಕರಿಸಬೇಕು. ರಸಗೊಬ್ಬರ ಕೊರತೆಯ ಸಮಸ್ಯೆಯೂ ತಲೆದೋರುತ್ತಿದೆ. ಮುಂದಿನ 15 ದಿನಗಳಲ್ಲಿ ಗೊಬ್ಬರ ಕೊರತೆ ತೀವ್ರವಾಗಬಹುದು. ಸರ್ಕಾರ ಈ ವಿಚಾರದಲ್ಲಿ ತಾರತಮ್ಯ ಮಾಡುವುದು ಒಳ್ಳೆಯದಲ್ಲ. ಎಲ್ಲಾ ಕ್ಷೇತ್ರಗಳಿಗೂ ಸರಿ ಸಮಾನವಾಗಿ ಅನುದಾನ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದು ಹೇಳಿದರು.

# ಮಕ್ಕಳಿಗಾಗಿ ನಾಳೆ ರಾಧಾ-ಕೃಷ್ಣ ವೇಷಧಾರಿ ಸ್ಪರ್ಧೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಿಶ್ವ ಹಿಂದು ಪರಿಷತ್ ಸ್ಥಾಪನಾ ದಿನ ಹಾಗೂ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಹತ್ತು ವರ್ಷದೊಳಗಿನ ಮಕ್ಕಳಿಗೆ ರಾಧಾ-ಕೃಷ್ಣ ವೇಷಧಾರಿ ಸ್ಪರ್ಧೆಯನ್ನು ಆ. 10ರ ಭಾನುವಾರ ಏರ್ಪಡಿಸಲಾಗಿದೆ ಎಂದು ವಿಶ್ವ ಹಿಂದು ಪರಿಷತ್ ಸಹ ಕಾರ್ಯದರ್ಶಿ ಕರಡಿಗಾಲ ಹರೀಶ್ ಹೇಳಿದ್ದಾರೆ.

ಶುಕ್ರವಾರ ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಭಾನುವಾರ ಬೆಳಗ್ಗೆ 10.30 ಕ್ಕೆ ಸಕಲೇಶಪುರದ ಪುರ ಭವನದಲ್ಲಿ ಕಾರ್ಯಕ್ರಮ ಆರಂಭವಾಗಲಿದೆ. ತೆಂಕಲಗೂಡು ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ ತೆಂಕಲಗೊಡು ಸಾನ್ನಿಧ್ಯ




ವಹಿಸುವರು. ಶಾಸಕ ಸಿಮೆಂಟ್ ಮಂಜು ಅಧ್ಯಕ್ಷತೆ ವಹಿಸಲಿದ್ದಾರೆ. ವಿಹೆಚ್‌ಪಿ ಜಿಲ್ಲಾ ಅಧ್ಯಕ್ಷ ಅನೂಪ್ ಗೌರವ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಪೊಲೀಸ್ ವೃತ್ತ ನಿರೀಕ್ಷಕ ನಿರಂಜನ್ ಕುಮಾರ್, ಪ್ರೇಮಾನಂದ ಶೆಟ್ಟಿ, ವಿಜಯ್ ಕುಮಾರ್ ಬಾಳೆಗದ್ದೆ, ಕಿಶೋರ್ ಶೆಟ್ಟಿ ಭಾಗವಹಿಸಲಿದ್ದಾರೆ.

ವಿಜೇತ ಮೊದಲ 10 ಮಕ್ಕಳಿಗೆ ನಗದು ಬಹುಮಾನ ಹಾಗೂ ಪಾರಿತೋಷಕ, ಭಾಗವಹಿಸುವ ಎಲ್ಲಾ ಮಕ್ಕಳಿಗೂ ನೆನಪಿನ ಕಾಣಿಕೆ ನೀಡಲಾಗುವುದು ಎಂದು ಹೇಳಿದರು.

ವಿಹೆಚ್‌ಪಿ ತಾಲ್ಲೂಕು ಸಹ ಸಂಯೋಜಕ ವಿಷ್ಣುರಾವ್ ಮಾತನಾಡಿ, ಅಖಂಡ ಭಾರತ ಸಂಕಲ್ಪ ದಿನ ಅಂಗವಾಗಿ ಆ. 14ರ ಗುರುವಾರ ಸಂಜೆ 6 ಗಂಟೆಗೆ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕುಶಾಲನಗರ ಒಕ್ಕಲಿಗರ ಸಮುದಾಯದ ವರೆಗೆ ಪಂಜಿನ ಮೆರವಣಿಗೆ ನಂತರ ಸಮುದಾಯದ ಭವನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಕಾರ್ಜುವಳ್ಳಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಶಾಸಕ ಸಿಮೆಂಟ್ ಮಂಜು, ಹಿಂದು ಮುಖಂಡರಾದ ಶಿವಕುಮಾರ್ ಜಾಗಟೆ, ಶರಣ್ ಪಂಪ್‌ವೆಲ್ ಸೇರಿದಂತೆ ಅನೇಕರು ಭಾಗಿಯಾಗಲಿದ್ದಾರೆ ಎಂದರು.

ಸುದ್ದಿಗೋಷ್ಟಿಯಲ್ಲಿ ಬಾಲಕೃಷ್ಣ ಬಿರಡಹಳ್ಳಿ, ಮಂಜುನಾಥ್ ಸಂಘಿ, ರವಿ ಹಾರ್ಲೆಕೂಡಿಗೆ, ಸುರೇಶ್ ಹೆತ್ತೂರು, ವಿಷ್ಣುರಾವ್ ಬಾಳೆಗದ್ದೆ ಉಪಸ್ಥಿತರಿದ್ದರು.

# ಮಹಿಳೆಯರು ಆರೋಗ್ಯ ನಿರ್ಲಕ್ಷ್ಯ ಮಾಡಬೇಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸದಾ ಒತ್ತಡದಲ್ಲೇ ಕೆಲಸ ಮಾಡುವ ಮಹಿಳೆಯರು ಆರೋಗ್ಯವನ್ನು ನಿರ್ಲಕ್ಷಿಸಬಾರದು ಎಂದು ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞೆ ಡಾ. ರಂಗಲಕ್ಷ್ಮಿ ಹೇಳಿದರು.

ನಗರದ ಕುವೆಂಪು ಮಹಿಳಾ ಸಂಘದ ಮಾಸಿಕ ಸಭೆಯಲ್ಲಿ ಸ್ತ್ರೀಯರ ಆರೋಗ್ಯ ವಿಷಯ ಕುರಿತು ಉಪನ್ಯಾಸ ನೀಡಿ, ಪುರುಷರಿಗಿಂತ ಮಹಿಳೆಯ ಜವಾಬ್ದಾರಿ ಎಲ್ಲಾ ಕ್ಷೇತ್ರದಲ್ಲೂ ಹೆಚ್ಚಿದೆ. ಮನೆಯಲ್ಲಿ ಹಿರಿಯರು ಹಾಗೂ ಕಿರಿಯರ ಬಗ್ಗೆ ವಿಶೇಷ ಕಾಳಜಿ, ಅತ್ತೆ-ಮಾವಂದಿರ ಪಾಲನೆ, ಗಂಡ-ಮಕ್ಕಳ ಯೋಗಕ್ಷೇಮ, ಮನೆಗೆ ಬರುವವರಿಗೆ ವಿಶೇಷ ಆತಿಥ್ಯ, ಹಬ್ಬ ಹರಿದಿನಗಳ ಉಸ್ತುವಾರಿ, ಮನೆಯಲ್ಲಿ ವಿಶೇಷ ಕಾರ್ಯಗಳ ಬಗ್ಗೆ ಕಾಳಜಿಯಿಂದ ತೊಡಗಿಸಿಕೊಳ್ಳುವಿಕೆ, ಮಕ್ಕಳ ವಿದ್ಯಾಭ್ಯಾಸದ ಜೊತೆಗೆ ತನ್ನ ಆರೋಗ್ಯವನ್ನೂ ಕಾಪಾಡಿಕೊಳ್ಳುವುದು ಮಹಿಳೆಯರ ವಿಶೇಷ ಕೌಶಲವಾಗಿದೆ. ಸದಾ ಒತ್ತಡದಲ್ಲೇ ಇರುವ ಸ್ತ್ರೀಯರು ಆರೋಗ್ಯಕ್ಕೆ ಆದ್ಯತೆ ನೀಡಲು ಸಾಧ್ಯವಾಗುವುದಿಲ್ಲ ಎಂದರು.



ಭಾರತೀಯ ಮಹಿಳೆಯರ ಜೀವನ ಶೈಲಿಯೇ ವೈವಿಧ್ಯವಯವಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಕೃಷಿ, ಹೈನುಗಾರಿಕೆ, ಜಾನುವಾರು ಸಾಕಣೆ, ಮನೆ ಮತ್ತು ಹೊಲದ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ನಗರ ಪ್ರದೇಶಗಳಲ್ಲಿ ಕೆಲವು ಮಹಿಳೆಯರು ತಮ್ಮ ಮನೆಯ ಕೆಲಸವಷ್ಟೇ ಅಲ್ಲ ಯಾವುದೇ ಸಂಸ್ಥೆಗಳಲ್ಲಿ ದುಡಿಯುತ್ತಾರೆ ಎಂದರು.

ಆದ್ದರಿಂದ ಸ್ತ್ರೀಯರು ಆರೋಗ್ಯದತ್ತ ಗಮನ ಹರಿಸಬೇಕು. 40 ರಿಂದ 50 ವರ್ಷ ತುಂಬಿದ ಪ್ರತಿ ಸ್ತ್ರೀಯಲ್ಲೂ ಶಕ್ತಿ, ಉತ್ಸಾಹ, ಆರೋಗ್ಯ ನಿಧಾನವಾಗಿ ಕ್ಷೀಣಿಸುತ್ತದೆ. ಸ್ನಾಯುಗಳ ಬಲ ಕಳೆದುಕೊಳ್ಳಲು ಪ್ರಾರಂಭವಾಗುತ್ತದೆ. ವ್ಯಾಯಾಮ, ಯೋಗ, ಪ್ರಾಣಾಯಾಮ, ನಡಿಗೆ ಹೀಗೆ ಯಾವುದಾದರೊಂದು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ತರಕಾರಿ, ಸೊಪ್ಪು, ಕಾಳು, ಹಣ್ಣು ಸೇವಿಸಬೇಕೆಂದು ಕಿವಿಮಾತು ಹೇಳಿದರು.

ನಿಗದಿತ ಅವಧಿಯಲ್ಲಿ ಸ್ತನ ಕ್ಯಾನ್ಸರ್, ಗರ್ಭ ಕೊರಳಿನ ಕ್ಯಾನ್ಸರ್‌ಗೆ ಸಂಬಂಧಿಸಿದ ಪರೀಕ್ಷೆ ಮಾಡಿಸಿಕೊಳ್ಳುವುದರ ಮೂಲಕ ಆರೋಗ್ಯ ಚೆನ್ನಾಗಿಟ್ಟುಕೊಳ್ಳಬೇಕು ಎಂದರು.

ಮಹಾನಗರ ಪಾಲಿಕೆ ಉಪಮೇಯರ್ ಹೇಮಲತಾ ಕಮಲ್‌ಕುಮಾರ್, ಸುನಂದ ಕೃಷ್ಣ, ಸ್ಮಿತಾ ಫಣಿರಾಜ್, ರಾಜೇಶ್ವರಿ, ಲತಾ ಜಗದೀಶ್, ಸುಜಾತಾ ರಾಜ್, ಚೇತನ, ಮಾಲಿನಿ ಸ್ವರೂಪ್, ಲೀಲಾವತಿ, ಪದ್ಮಶರ್ಮ, ಸಾವಿತ್ರಿ, ಕಾಮಾಕ್ಷಿ ಮತ್ತಿತರರಿದ್ದರು.

# ಅಪಘಾತದಲ್ಲಿ ಪಾದಚಾರಿ ಸಾವು

ಹಳೇಬೀಡು: ರಸ್ತೆ ಬದಿ ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯೊಬ್ಬರು ಬೈಕ್ ಡಿಕ್ಕಿಯಾಗಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಘಟ್ಟದಹಳ್ಳಿ-ಸಾಣೇನಹಳ್ಳಿ ಮಾರ್ಗಮಧ್ಯೆ ನಡೆದಿದೆ. ತಾಲ್ಲೂಕಿನ ಸಾಣೇನಹಳ್ಳಿ ಗ್ರಾಮದ ಸುಖಾನಂದ ಮೃತರು. ಗುರುವಾರ ಸಂಜೆ 4ರ ಸಮಯದಲ್ಲಿ ಹುಲಿಕಲ್ಲಹಳ್ಳಿ ಸಮೀಪದ ಜಮೀನಿನಲ್ಲಿ ಕಟ್ಟಿದ್ದ ಹಸುಗಳನ್ನು ಹೊಡೆದುಕೊಂಡು ಬರಲು ಹೋಗುತ್ತಿದ್ದಾಗ ಘಟ್ಟದಹಳ್ಳಿ ಕಡೆಯಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿದೆ. ಆಸ್ಪತ್ರೆಗೆ ಕರೆತರುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 1.46 ಲಕ್ಷ ರೂ. ಬೆಲೆಯ ರಾಗಿ ಕಳವು

ಚನ್ನರಾಯಪಟ್ಟಣ: ಗೋದಾಮು ಶೆಲ್ಟರ್ ಮುರಿದಿರುವ ಕಳ್ಳರು ಎಪಿಎಂಸಿಗೆ ಸೇರಿದ 70 ಚೀಲ ರಾಗಿ ಕಳವು ಮಾಡಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಗೋದಾಮಿನಲ್ಲಿ 1.46 ಲಕ್ಷ ರೂ. ಮೌಲ್ಯದ 70 ಚೀಲ ರಾಗಿ ಶೇಖರಿಸಿಡಲಾಗಿತ್ತು.

# ಮಹಾನಗರ ಪಾಲಿಕೆಗೆ ಲಕ್ಷಾಂತರ ರೂ. ವಂಚನೆ

ಹಾಸನ: ಮಹಾನಗರ ಪಾಲಿಕೆಗೆ ಲಕ್ಷಾಂತರ ರೂಪಾಯಿ ತೆರಿಗೆ ವಂಚಿಸಿರುವ ಪ್ರಕರಣ ಬೆಳಕಿಗೆ ಬಂದಿದ್ದು ಪೌರಾಯುಕ್ತ ಆರ್. ಕೃಷ್ಣಮೂರ್ತಿ ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬ್ಯಾಂಕ್‌ನ ನಕಲಿ ಸೀಲ್ ಸೃಷ್ಟಿಸಿ ಕರಾಮತ್ತು ಪ್ರದರ್ಶಿಸಲಾಗಿದೆ.

ಮೇ 19 ರಿಂದ ಜೂನ್ 30ರ ವರೆಗೆ ವಾರ್ಡ್ ನಂ. 16ರ ಸರ್ವೆ ನಂ. 27/12, ಸ.ನ 3ರಲ್ಲಿ 1/2 ಗುಂಟೆ ಪ್ರದೇಶ, ವಾರ್ಡ್ ನಂ. 30ರ ಸರ್ವೆ ನಂ. 250/2 ರಲ್ಲಿನ 0.1 ಗುಂಟೆ ಪ್ರದೇಶ, ಸರ್ವೆ ನಂ. 238/17 ರಲ್ಲಿ, ನ. 0.01 ಗುಂಟೆ ಪ್ರದೇಶ, ವಾರ್ಡ್ ನಂ. 30 ರಲ್ಲಿನ ಸರ್ವೆ ನಂ. 250/7 ರಲ್ಲಿ, ಸ 0.01 ಗುಂಟೆ ಪ್ರದೇಶದ ವಾರುಸುದಾರರು ಪಾಲಿಕೆಗೆ ಕಟ್ಟಬೇಕಾಗಿರುವ ಮನೆ ಕಂದಾಯ, ನಿವೇಶನ ಕಂದಾಯ, ಅಭಿವೃದ್ಧಿ ಶುಲ್ಕ, ಘನ ತಾಜ್ಯ ತೆರಿಗೆಗಳನ್ನು ಪಾವತಿಸದೆ ಮೋಸ ಎಸಗಿದ್ದಾರೆ.

ಮಹಾನಗರ ಪಾಲಿಕೆಯ ಆಕ್ಸಿಸ್ ಬ್ಯಾಂಕ್‌ನ ಖಾತೆಗೆ ಹಣ ಸಂದಾಯ ಮಾಡದೇ ಬ್ಯಾಂಕ್‌ನ ನಕಲಿ ಮುದ್ರೆಯನ್ನು ತಯಾರಿಸಿ ಚಲನ್‌ಗಳಿಗೆ ಹಣ ಸಂದಾಯದ ಸೀಲು ಹಾಕಿ ಪಾಲಿಕೆಗೆ ತೆರಿಗೆ ಕಟ್ಟದೆ ವಂಚಿಸಿದ್ದಾರೆ. ಬಳಿಕ ಕಂದಾಯ ಪಾವತಿಸಿರುವುದಾಗಿ ಚಲನ್ ತೋರಿಸಿದ್ದಾರೆ.

# ಪಕ್ಷಕ್ಕೆ ದುಡಿದವರಿಗೆ ಮನ್ನಣೆ ನೀಡಲು ಆಗ್ರಹ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಕಾಂಗ್ರೆಸ್ ಪಕ್ಷದ ಗಮನಕ್ಕೆ ತರದೆ ಕೆಲ ವ್ಯಕ್ತಿಗಳು ಹುಡಾ ಅಧ್ಯಕ್ಷ ಸ್ಥಾನಕ್ಕಾಗಿ ಒಬ್ಬ ವ್ಯಕ್ತಿಯ ಪರವಾದ ಪ್ರತಿಭಟನೆ ನಡೆಸುವ ಮೂಲಕ ಪಕ್ಷಕ್ಕೆ ಹಾನಿ ಉಂಟುಮಾಡಲಾಗಿದೆ. ಪಕ್ಷದ ದುಡಿದವರಿಗೆ ಹುಡಾ ಅಧ್ಯಕ್ಷ ಸ್ಥಾನ ಸಿಗಬೇಕೆ ಹೊರತು ಒಂದು ದಿನವೂ ಪಕ್ಷದ ಬಾವುಟ ಹಿಡಿಯದವರಿಗಲ್ಲ ಎಂದು ಕೆಪಿಸಿಸಿ ಸದಸ್ಯ ಸಲೀಂ ಅಬ್ದುಲ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಡಾ ಅಧ್ಯಕ್ಷ ಸ್ಥಾನ ಸಂಬಂಧ ಪಕ್ಷದ ತತ್ವ ಸಿದ್ಧಾಂತಕ್ಕೆ ವಿರುದ್ಧವಾಗಿ ಬುಧವಾರ ನಾವೆಲ್ಲರೂ ಕಾಂಗ್ರೆಸ್ಸಿನವರೇ ಎಂಬಂತೆ ಬಿಂಬಿಸುವ ಪ್ರತಿಭಟನಾ ಮೆರವಣಿಗೆ ನಡೆಸಿ, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ.

ಆದರೆ ಹುಡಾ ಅಧ್ಯಕ್ಷ ಸ್ಥಾನ ಯಾರಿಗೆ ಕೊಡಬೇಕು ಎಂಬುದನ್ನ ಮುಖ್ಯಮಂತ್ರಿ ತೀರ್ಮಾನ ಮಾಡಲಿದ್ದು, ಅದಕ್ಕೆ ನಾವೆಲ್ಲ ಬದ್ಧರಿದ್ದೇವೆ ಎಂದು ಹೇಳಿದರು.

ಪ್ರತಿಭಟನೆ ನಡೆಸುವ ಬಗ್ಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಅಥವಾ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಗೆ ಯಾವುದೇ ಮಾಹಿತಿ ನೀಡದೇ ಕೆಲವು ವ್ಯಕ್ತಿಗಳು ನಾವು ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ಎಂದು ಹೇಳಿಕೊಂಡು, ಯಾರೇ ಒಬ್ಬ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತನಿಗೆ ಸ್ಥಾನಮಾನ ಕೇಳದೆ, ಒಬ್ಬ ಖಾಸಗಿ ವ್ಯಕ್ತಿಯ ಪರವಾದ ಪ್ರತಿಭಟನೆ ನಡೆಸಿರುವುದು ಒಪ್ಪುವಂತದ್ದಲ್ಲ ಎಂದರು.

ಕೆಲವು ಕೂಲಿ ಕಾರ್ಮಿಕರಿಗೆ ಆಮಿಷ ಒಡ್ಡಿ ಅವರನ್ನು ಕರೆತಂದು ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ನಂತರದಲ್ಲಿ ನಗರ ಪೊಲೀಸ್ ಠಾಣೆ ಮುಂಭಾಗ ಪ್ರತಿಭಟನೆಗೆ ಭಾಗವಹಿಸಲು ಬಂದಿದ್ದ ಕೂಲಿ ಕಾರ್ಮಿಕರಿಗೆ ಊಟ, ತಿಂಡಿ ಮತ್ತು ಸಂಬಳ ನೀಡಲಿಲ್ಲ ಎಂಬ ಬಗ್ಗೆ ವರದಿಯಾಗಿದೆ.

ಇದು ಬರುವ ದಿನಗಳಲ್ಲಿ ಪಕ್ಷದ ಘನತೆಗೆ ಧಕ್ಕೆಯನ್ನುಟ್ಟು ಉದ್ದೇಶದಿಂದ, ಪಕ್ಷಕ್ಕೆ ಸಂಬಂಧ ಇಲ್ಲದ ಕೆಲವು ಶಕ್ತಿಗಳು ಆಟ ಆಡುತ್ತಿವೆ. ಈ ಬಗ್ಗೆ ಪಕ್ಷದ ವರಿಷ್ಠರ ಗಮನಕ್ಕೆ ತರಲಾಗಿದ್ದು, ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳಿಗೆ ವಿರುದ್ಧವಾಗಿ ನಡೆದು ಕೊಂಡವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಜಿಲ್ಲಾ ಕಾಂಗ್ರೆಸ್‌ನಿಂದ ಎಲ್ಲಾ ವರ್ಗದ ಜನರಿಗೆ ಸೂಕ್ತ ಸ್ಥಾನಮಾನ ನೀಡುವಂತೆ ಜಿಲ್ಲಾಧ್ಯಕ್ಷರ ಮೂಲಕ ಸಂಸದರು, ಜಿಲ್ಲಾ ಉಸ್ತುವಾರಿ ಸಚಿವರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗಿದೆ. ಸೂಕ್ತ ಸಮಯದಲ್ಲಿ ಎಲ್ಲಾ ವರ್ಗಕ್ಕೂ ಸ್ಥಾನಮಾನ ಸಿಗಲಿದೆ ಎಂಬ ವಿಶ್ವಾಸ ನಮ್ಮದು. ಈ ವಿಚಾರದಲ್ಲಿ ಮುಖ್ಯಮಂತ್ರಿ ಅವರಿಗೇ ನಾವೆಲ್ಲ ಅಧಿಕಾರ ನೀಡಿದ್ದು, ಅವರು ತೆಗೆದುಕೊಳ್ಳುವ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿದ್ದೇವೆ ಎಂದರು.

ಹಾಸನ ಬ್ಲಾಕ್ ಅಧ್ಯಕ್ಷ ಅಬ್ದುಲ್ ಖಯ್ಯುಂ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘು ದಾಸರಕೊಪ್ಪಲು, ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಸಮದ್, ಗ್ರಾಮಾಂತರ ಬ್ಲಾಕ್ ಅಧ್ಯಕ್ಷ ಚಂದ್ರಶೇಖರ್ ಇದ್ದರು.

# ಹುಡಾ ಅಧ್ಯಕ್ಷರನ್ನಾಗಿ ಪಟೇಲ್ ಶಿವಪ್ಪ ಅವರನ್ನೇ ಪರಿಗಣಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಅರಸೀಕೆರೆ ತಾಲ್ಲೂಕು ಗೊಲ್ಲರಹಳ್ಳಿ ಪಟೇಲ್ ಶಿವಪ್ಪ ಅವರಿಗೆ ಹುಡಾ ಅಧ್ಯಕ್ಷ ಸ್ಥಾನ ನೀಡುವಂತೆ ಜಿಲ್ಲಾ ಕುರುಬರ ಸಂಘದ ನಿರ್ದೇಶಕ ರಾಜಪ್ಪ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟೇಲ್ ಶಿವಪ್ಪ ಅವರು ಕಳೆದ 40 ವರ್ಷಗಳಿಂದಲೂ ಕಾಂಗ್ರೆಸ್ ಪಕ್ಷದಲ್ಲಿದ್ದುಕೊಂಡು ಪಕ್ಷ ಸಂಘಟನೆಗಾಗಿ ತಮ್ಮನ್ನು ತೊಡಗಿಸಿಕೊಂಡು ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಆರಂಭದಿಂದ ಈವರೆಗೂ ಕಾಂಗ್ರೆಸ್‌ನಲ್ಲೇ ಇದ್ದು, ಪಕ್ಷ ನಿಷ್ಠರಾಗಿ ಕೆಲಸ ಮಾಡಿದ್ದಾರೆ. ಹಿರಿಯರೂ ಆಗಿರುವ ಅವರಿಗೆ ಅವಕಾಶ ನೀಡಬೇಕೆಂದು ಮನವಿ ಮಾಡಿದರು.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ 2 ವರ್ಷದಿಂದ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡದೇ ಇರುವುದು ಪ್ರಾಧಿಕಾರದ ಕೆಲಸ ಕಾರ್ಯಗಳಿಗೆ ಮತ್ತು ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಅನನುಕೂಲವಾಗಿದೆ. ಪಟೇಲ್ ಶಿವಪ್ಪ ಅವರು ಪ್ರಸ್ತುತ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸುತ್ತಾ ಅನೇಕ ಜನಪರ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದಾರೆ ಎಂದರು.

ಹಿಂದುಳಿದ ಜನಾಂಗಕ್ಕೆ ಇದುವರೆವಿಗೂ ಸರಿಯಾದ ಪ್ರಾತಿನಿಧ್ಯ ಸಿಕ್ಕಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವಿದ್ದರೂ ನಮ್ಮ ಜನಾಂಗಕ್ಕೆ ಇಲ್ಲಿಯವರೆಗೂ ಯಾವುದೇ ಅನುಕೂಲ ಆಗಿಲ್ಲ. ಅರಸೀಕೆರೆ ವಿಧಾನಸಭಾ ಕ್ಷೇತ್ರದಿಂದ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಅವಕಾಶ ಇದ್ದರೂ ವಂಚಿತರಾದರು. ಶಿವಪ್ಪ ಅವರು ಅರಸೀಕೆರೆ ಕ್ಷೇತ್ರ ಮಾತ್ರವಲ್ಲದೆ ಜಿಲ್ಲೆಯಾದ್ಯಂತ ಉತ್ತಮ ಹೆಸರು ಪಡೆದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಜಿಲ್ಲಾ ಉಸ್ತುವಾರಿ ಸಚಿವ ರಾಜಣ್ಣ ಅವರು ಪಟೇಲ್ ಶಿವಪ್ಪ ಅವರ ಹಿರಿತನ ಹಾಗು ಸೇವೆ ಪರಿಗಣಿಸಿ ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸ್ಥಾನ ನೀಡಬೇಕು, ಬೇರೆಯವರಿಗೆ ಮಣೆ ಹಾಕಬಾರದು ಎಂದು ಮನವಿ ಮಾಡಿದರು.

ಜಿಲ್ಲಾ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಸಣ್ಣೇಗೌಡ, ಸಂಘಟನಾ ಕಾರ್ಯದರ್ಶಿ ಕೃಷ್ಣ, ಸದಸ್ಯ ಆರ್.ಎಸ್. ಯೋಗಾನಂದ್, ಆರ್.ಎನ್. ಚಂದ್ರಶೇಖರ್ ಇದ್ದರು.

# ಮದ್ಯ ವ್ಯಸನಿಗಳೊಮ್ಮೆ ಕುಟುಂಬ ನೆನಪಿಸಿಕೊಳ್ಳಿ



ಆಲೂರು: ಮದ್ಯವ್ಯಸನಿಗಳು ತಮ್ಮ ಹೆಂಡತಿ ಮಕ್ಕಳಿರುವ ಫೋಟೊವನ್ನು ಮುಂದಿಟ್ಟುಕೊಂಡು ಆತ್ಮಾವಲೋಕನ ಮಾಡಿಕೊಳ್ಳಿ ಎಂದು ತಹಶೀಲ್ದಾರ್ ಮಲ್ಲಿಕಾರ್ಜುನ ಕಿವಿಮಾತು ಹೇಳಿದರು.

ಪಟ್ಟಣ ವೀರಶೈವ ಕಲ್ಯಾಣ ಮಂಟಪದಲ್ಲಿ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಏರ್ಪಡಿಸಲಾಗಿದ್ದ 1964ನೇ ಮದ್ಯವರ್ಜನ ಶಿಬಿರ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಮದ್ಯಪ್ರದೇಶದಲ್ಲಿ ವಾಹನಗಳು ಅತಿಯಾಗಿ ಅಪಘಾತಕ್ಕೀಡಾಗುತ್ತಿದ್ದ ಸಂದರ್ಭದಲ್ಲಿ ಪರಿಶೀಲನೆ ನಡೆಸಿದಾಗ, ಚಾಲಕ ಮದ್ಯಪಾನ ಮಾಡಿ ವಾಹನಗಳನ್ನು ಓಡಿಸುತ್ತಿದ್ದುದು ಪತ್ತೆಯಾಯಿತು. ಆಗ ಪ್ರತಿಯೊಬ್ಬ ಚಾಲಕನು ತನ್ನ ಹೆಂಡತಿ ಮಕ್ಕಳಿರುವ ಫೋಟೋವನ್ನು ವಾಹನದಲ್ಲಿ ತನ್ನ ಮುಂದಿಟ್ಟುಕೊಂಡು ಓಡಿಸಲು ನಿಯಮ ರೂಪಿಸಲಾಯಿತು. ನಿಯಮ ಪಾಲನೆಯಾದ ನಂತರ ವಾಹನ ಅಪಘಾತಗಳು ಕಡಿಮೆಯಾದವು ಎಂದರು.

ಮದ್ಯವ್ಯಸನಿಗಳು ಮದ್ಯಪಾನ ಮಾಡುವಾಗ ತಮ್ಮ ಕುಟುಂಬದ ಫೋಟೋವನ್ನು ಒಮ್ಮೆ ನೋಡಿದಾಗ ತಮಗೆ ಅರ್ಥವಾಗುತ್ತದೆ. ನಾನು ಕುಡಿದು ಜೀವನ ನಾಶ ಮಾಡಿಕೊಂಡರೆ ನನನ್ನು ಅವಲಂಬಿಸಿರುವ ನನ್ನ ಕುಟುಂಬ ಅನಾಥವಾಗುತ್ತದೆ ಎಂಬ ಮನೋಭಾವನೆ ಉಂಟಾಗುತ್ತದೆ. ಅದನ್ನು ಜೀವನದಲ್ಲಿ ಪಾಲಿಸಿದರೆ ಕುಡಿತ ಚಟದಿಂದ ದೂರವಿರಬಹುದು ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಿಸಾರ್ ಫಾತಿಮ ರವರು, ಅತಿಯಾಗಿ ಮದ್ಯಪಾನ ಮಾಡುವುದರಿಂದ ಮಾನಸಿಕ, ದೈಹಿಕವಾಗಿ ಕುಗ್ಗಿ ಹೋಗುತ್ತಾರೆ. ಲಿವರ್, ಕಿಡ್ನಿ ತೊಂದರೆ ಸೇರಿ ರಕ್ತಹೀನತೆಯಿಂದ ದೇಹದ ಎಲ್ಲ ಭಾಗಗಳು ನಾಶವಾಗಿ ಖಿನ್ನತೆ ಉಂಟಾಗಿ ದಿನ ಕಳೆದಂತೆ ಮರಣ ಸಂಭವಿಸುತ್ತದೆ. ಶಿಬಿರಾರ್ಥಿಗಳಿಗೆ ಆರೋಗ್ಯ ತಪಾಸಣೆ ಮಾಡಲು ವೈದ್ಯರ ತಂಡವನ್ನು ರಚಿಸಲಾಗಿದ್ದು ಉಚಿತವಾಗಿ ಚಿಕಿತ್ಸೆ ನೀಡಲಾಗುವುದು ಎಂದರು.

ಜನಜಾಗೃತಿ ಮೈಸೂರು ಪ್ರಾದೇಶಿಕ ವಿಭಾಗದ ಯೋಜನಾಧಿಕಾರಿ ಮುಖೇಶ್ ಮಾತನಾಡಿ, ಶಿಬಿರದಲ್ಲಿ ಪಾಲ್ಗೊಂಡಿದ್ದ ವ್ಯಕ್ತಿಯೊಬ್ಬರು ಮದ್ಯ ಅಂಗಡಿಗಳನ್ನು ಮುಚ್ಚಿದರೆ ನಾವು ಕುಡಿಯುವುದಿಲ್ಲ, ಮದ್ಯದಂಗಡಿಗಳನ್ನು ಕೂಡಲೆ ಮುಚ್ಚಿ ಎಂದು ಆಗ್ರಹಿಸಿದರು.

# ಹಿಂದು ರುದ್ರಭೂಮಿಯಲ್ಲಿ ಅವ್ಯವಸ್ಥೆ ಆಗರ



ಹೊಳೆನರಸೀಪುರ: ನಿರ್ವಹಣೆ ಕೊರತೆಯಿಂದ ಪಟ್ಟಣದ ಹಿಂದು ರುದ್ರಭೂಮಿ ಅವ್ಯವಸ್ಥೆಯ ಆಗರವಾಗಿದ್ದು ಶವ ಸಂಸ್ಕಾರಕ್ಕೆ ಕಾಲಿಡಲು ಅಸಾಧ್ಯವಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಹಾದುಹೋಗಿರುವ ಹೇಮಾವತಿ ನದಿ ತೀರದಲ್ಲಿ 6 ಎಕರೆಯಷ್ಟು ಭೂಮಿ ಹಿಂದುಗಳ ಶವ ಸಂಸ್ಕಾರಕ್ಕೆಂದು ಮೀಸಲಿಡಲಾಗಿದೆ. ಆದರೆ ಪುರಸಭೆ ಸೂಕ್ತ ನಿರ್ವಹಣಾ ಕಾರ್ಯ ನಡೆಸದೇ ಮೈಮರೆತಿದೆ. ಹೀಗಾಗಿ ಕಳೆದ 3 ತಿಂಗಳ ಹಿಂದಷ್ಟೆ ಯುವಕರ ತಂಡ ಸ್ವಯಂ ಪ್ರೇರಿತರಾಗಿ ರುದ್ರಭೂಮಿ ಹಸನುಗೊಳಿಸುವ ಕೆಲಸ ಮಾಡಿದ್ದರು. ಪುರಸಭಾ ಅಧ್ಯಕ್ಷ ಎಚ್.ಕೆ. ಪ್ರಸನ್ನ ಸಹ ಯುವಕರ ಉತ್ಸಾಹಿತ ಸಾಮಾಜಿಕ ಕಾರ್ಯಕ್ಕೆ ಇಂಬು ನೀಡಿದ್ದರು. ಪುರಸಭಾ ವತಿಯಿಂದ ಜೆಸಿಬಿ ಯಂತ್ರ ಕಳುಹಿಸಿ ಯುವಕರ ಕಾರ್ಯಕ್ಷಮತೆಗೆ ಕೈ ಜೋಡಿಸಿದ್ದರು. ಆದರೆ ಅದೇ ರುದ್ರಭೂಮಿಗೆ ತೆರಳಲು 100 ಮೀ ನಷ್ಟು ಕಾಂಕ್ರೀಟ್ ರಸ್ತೆ ನಿರ್ಮಿಸಿಕೊಡಿ. ಶವಸಂಸ್ಕಾರ ನೆರವೇರಿಸಲು ಬರುವವರು ಕೂರಲು ಕಲ್ಲಿನ ಬೆಂಚು, ಕುಡಿಯುವ ನೀರಿಗೆ ನಳ ವ್ಯವಸ್ಥೆ ಮಾಡಿಸಿ ಎಂದು ಮನವಿ ಮಾಡಿದ್ದರು. ಇದ್ಯಾವುದೂ ಈ ವರೆಗೂ ಕಾರ್ಯಗತವಾಗಿಲ್ಲ ಎಂದು ಕಾಂಗ್ರೆಸ್ ಮುಖಂಡ ಕೃಷ್ಣ(ಕಿಟ್ಟಿ) ದೂರಿದ್ದಾರೆ.

ಮೊನ್ನೆಯಷ್ಟೆ ಶವ ಸಂಸ್ಕಾರಕ್ಕೆ ತೆರಳಿದವರು ಬೆಳೆದುನಿಂತ ಗಿಡಗುಂಟೆಗಳ ನಡುವೆ ಶವ ಹೊತ್ತೊಯ್ಯಲು ಹರಸಾಹಸ ಪಟ್ಟರು. ನೀರಿಗಾಗಿ ನದಿಗೆ ಇಳಿಯಲು ಆಸ್ಪದವಿಲ್ಲದಷ್ಟು ತಟ ಕೊರಕಲು ಬಿದ್ದಿದೆ. ಕನಿಷ್ಟ ರಸ್ತೆಯನ್ನಾದರೂ ಮಾಡಿಸಿಲ್ಲದ್ದು, ಬೇಸರದ ಸಂಗತಿ. ಸ್ವಯಂ ಶ್ರಮದಾನ ನಡೆಸಿದ ಯುವಕರ ಕಾರ್ಯ ಅಂದು ಮೆಚ್ಚುಗೆ ವ್ಯಕ್ತವಾಗಿತ್ತು. ಆದರೆ ಇಂದು ರುದ್ರಭೂಮಿ ಪರಿಸ್ಥಿತಿ ಕಂಡವರು, ಏನು ಮಾಡಿದರೂ, ಅಷ್ಟೇ ಎಂದು ಮೂಗುಮುರಿಯುವಂತಾಗಿದೆ. ಪುರಸಭೆ ಈಗಾದರೂ ಗಮನ ಹರಿಸಲಿ ಎನ್ನುವುದು ನಾಗರಿಕರ ಒತ್ತಾಯವಾಗಿದೆ.

> ಕೆಲ ತಿಂಗಳಿಂದ ಮಳೆ ನಿರಂತರ ಬರುತ್ತಿದೆ. ಹಾಗಾಗಿ ಗಿಡಗಂಟಿ ಬೆಳೆದು ಸಂಚಾರಕ್ಕೆ ಅಡಚಣೆಯಾಗಿದೆ. ಪಟ್ಟಣದ ಬಹುತೇಕ ರಸ್ತೆ ಸಮಸ್ಯೆಗಳಿದ್ದ ಕಡೆಗಳಲ್ಲಿ ಕಾಂಕ್ರೀಟೀಕರಣ ನಡೆಸಿ ಸಂಚಾರ ಸುಗಮಕ್ಕೆ ಗಮನ ಕೊಡಲಾಗುತ್ತಿದೆ. ಯುವಕರ ತಂಡ ಅಂದು ಸಮಾಜಿಕ ಕಳಕಳಿ ಇರಿಸಿ ನಡೆಸಿದ ಕಾರ್ಯ ಪ್ರಶಂಸನೀಯ. ಸದ್ಯಕ್ಕೆ ಗಿಡಗಂಟಿ ಕತ್ತರಿಸಲು ಸೂಚಿಸುತ್ತೇನೆ. ನಂತರದ ದಿನಗಳಲ್ಲಿ ಹೆಚ್ಚಿನ ಅಭಿವೃದ್ಧಿಗೆ ಕಾರ್ಯ ರೂಪಿಸಲಾಗುವುದು.
>
> **– ಶಿವಶಂಕರ್, ಪುರಸಭಾ ಮುಖ್ಯಾಧಿಕಾರಿ**

# ಇಂದು ಸಿಐಟಿಯು ಜಿಲ್ಲಾ ಸಮ್ಮೇಳನ

ಹಾಸನ: ಕರಾಳ ಕಾರ್ಮಿಕ ಸಂಹಿತೆ ವಿರೋಧಿಸಿ 36 ಸಾವಿರ ರೂ. ಕನಿಷ್ಠ ವೇತನಕ್ಕೆ ಆಗ್ರಹಿಸಿ ಸಿಐಟಿಯು 7ನೇ ಜಿಲ್ಲಾ ಸಮ್ಮೇಳನ ಆ.9 ರಂದು ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆಯಲಿದೆ ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ತಿಳಿಸಿದ್ದಾರೆ.

ಸಿಐಟಿಯು ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ ಅವರು ಸಮ್ಮೇಳನದ ಉದ್ಘಾಟನಾ ಭಾಷಣ ಮಾಡಲಿದ್ದಾರೆ. ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಸಮಾರೋಪ ಭಾಷಣ ಮಾಡಲಿದ್ದಾರೆ.

ಜಿಲ್ಲಾ ಸಮ್ಮೇಳನಕ್ಕೆ ಜಿಲ್ಲೆಯಲ್ಲಿ ಸಿಐಟಿಯುಗೆ ಸಂಯೋಜನೆಗೊಂಡಿರುವ ಕಾರ್ಮಿಕ ಸಂಘಗಳಿಂದ 200 ಆಯ್ದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಬೆಳಿಗ್ಗೆ 10.30ಕ್ಕೆ ಆರಂಭವಾಗಿ ಸಂಜೆಯವರೆಗೂ ನಡೆಯುವ ಸಮ್ಮೇಳನದಲ್ಲಿ ಜಿಲ್ಲೆಯ ರಾಜಕೀಯ, ಆರ್ಥಿಕ, ಸಾಮಾಜಿಕ ಪರಿಸ್ಥಿತಿ, ಕಾರ್ಮಿಕರು ಮತ್ತು ಇತರೆ ದುಡಿಯುವ ಜನರ ಸ್ಥಿತಿಗತಿ ಹಾಗೂ ಸಿಐಟಿಯುನ ಸಂಘಟನಾ ಪರಿಸ್ಥಿತಿ ಕುರಿತು ಲಿಖಿತ ಕರಡು ವರದಿ ಆಧಾರದಲ್ಲಿ ಪ್ರತಿನಿಧಿಗಳು ಚರ್ಚಿಸಿ ಮುಂದಿನ ಮೂರು ವರ್ಷಗಳ ಅವಧಿಗೆ ಹೊಸ ಸಿಐಟಿಯು ಜಿಲ್ಲಾ ಸಮಿತಿ ಆಯ್ಕೆ ಮಾಡಲಿದ್ದಾರೆ. ದುಡಿಯುವ ಜನರು ಮತ್ತು ಜನಸಾಮಾನ್ಯರ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಮುಂದೆ ಮಾಡಬೇಕಾದ ಹೋರಾಟ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು. ಜೊತೆಗೆ ಜಿಲ್ಲೆಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

# ಶಾಸಕರಿಂದ ಸಮುದಾಯ ಭವನ ಉದ್ಘಾಟನೆ



ಹಾಸನ: ತಾಲ್ಲೂಕಿನ ನಂಜೆದೇವರ ಕಾವಲು ಗ್ರಾಮದಲ್ಲಿ ಶಾಸಕ ಹೆಚ್.ಪಿ.ಸ್ವರೂಪ್ ಸಮುದಾಯ ಭವನ ಹಾಗೂ ರಸ್ತೆ ಉದ್ಘಾಟನೆ ನರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಗ್ರಾಮದ ಶುಭ ಸಮಾರಂಭಗಳಿಗೆ ಸಮುದಾಯ ಭವನದ ಅವಶ್ಯಕತೆ ಇದೆ ಎಂಬ ಗ್ರಾಮಸ್ಥರ ಹಲವು ದಿನಗಳ ಬೇಡಿಕೆ ಇದ್ದ ಹಿನ್ನೆಲೆ ನೂತನ ಸಮುದಾಯ ಭವನವನ್ನು ನಿರ್ಮಿಸಲಾಗಿತ್ತು. ಇಂದು ಗ್ರಾಮಸ್ಥರು ಹಾಗೂ ಜೆಡಿಎಸ್ ಕಾರ್ಯಕರ್ತರ ಸಮ್ಮುಖದಲ್ಲಿ ಉದ್ಘಾಟಿಸಿ ಗ್ರಾಮಸ್ಥರ ಅನುಕೂಲಕ್ಕಾಗಿ ಬಿಟ್ಟು ಕೊಡಲಾಯಿತು ಎಂದು ತಿಳಿಸಿದರು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-09

**1942:** ಆಗಸ್ಟ್ 9ರಂದು ಮಹಾತ್ಮ ಗಾಂಧೀಜಿಯವರು ಆಂಗ್ಲರೇ ಭಾರತವನ್ನು ಬಿಡಿ ಎಂಬ ಘೋಷಣೆಯೊಂದಿಗೆ ಕ್ವಿಟ್ ಇಂಡಿಯಾ ಚಳವಳಿ ಆರಂಭಿಸಿದರು. ಬಾಂಬೆ (ಇಂದಿನ ಮುಂಬೈ) ಯಲ್ಲಿ ನಡೆದ ಎಐಸಿಸಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು.

**1945:** ನಾಗಾಸಾಕಿ ಮೇಲಿನ ಅಣು ಬಾಂಬ್ ದಾಳಿ, ಅಮೆರಿಕ, ಜಪಾನ್‌ನ ನಾಗಾಸಾಕಿ ನಗರದಲ್ಲಿ ಫ್ಯಾಟ್ ಮ್ಯಾನ್ ಹೆಸರಿನ ಅಣುಬಾಂಬ್ ಸ್ಫೋಟ ಮಾಡಿತು.

**1965:** ಸಿಂಗಪುರ್ ಸ್ವಾತಂತ್ರ್ಯ, ಸಿಂಗಪುರ್ ಮಲೇಷಿಯಾದಿಂದ ಪ್ರತ್ಯೇಕವಾಗಿ ಸ್ವಾತಂತ್ರ ರಾಷ್ಟ್ರವಾಯಿತು.

### ಜನನ

**1900:** ಚಾಮ್‌ಪಿಯಾನ್ ಡೆಲ್ ಮಾರು, ಫ್ರೆಂಚ್ ಸಾಹಿತಿ ಮತ್ತು ರಾಜಕೀಯ ಚಿಂತಕ.

### ಮರಣ

**1975:** ಡಮಿಯಾನ್ ಪಾರ್‍ರರ್, ನೊಬೆಲ್ ಪ್ರಶಸ್ತಿ ವಿಜೇತ ಆರ್ಥಿಕ ತಜ್ಞ.

# ಸಹೋದರ-ಸಹೋದರಿಯರ ಬಾಂಧವ್ಯದ ಬೆಸುಗೆ ರಕ್ಷಾ ಬಂಧನ



ರಕ್ಷಾ ಬಂಧನ ಹಬ್ಬವು ಸಹೋದರ ಸಹೋದರಿಯರ ಅಪೂರ್ವವಾದ ಬಂಧವನ್ನು ಪ್ರತಿನಿಧಿಸುತ್ತದೆ. ಈ ವರ್ಷದ ರಕ್ಷಾಬಂಧನ ಹಬ್ಬವನ್ನು ಆಗಸ್ಟ್ 9 ರಂದು ಆಚರಿಸಲಾಗುವುದು. ಈ ಸಮಯದಲ್ಲಿ ಸಹೋದರರು ತಮ್ಮ ಸಹೋದರಿಗೆ ಉಡುಗೊರೆಗಳನ್ನು ನೀಡುತ್ತಾರೆ. ಆದರೆ ಕೆಲವು ವಸ್ತುಗಳನ್ನು ಅಪ್ಪಿತಪ್ಪಿಯು ಉಡುಗೊರೆಯಾಗಿ ನೀಡಬಾರದು ಎಂದು ಹೇಳಲಾಗುತ್ತದೆ. ಆ ಐದು ವಸ್ತುಗಳ ಬಗ್ಗೆ ಇಲ್ಲಿದೆ ನೋಡಿ ಸಂಪೂರ್ಣ ಮಾಹಿತಿ.

ರಕ್ಷಾ ಬಂಧನ ಹಬ್ಬವು ಸಹೋದರ ಸಹೋದರಿಯರ ಸಂಬಂಧವನ್ನು ಇನ್ನಷ್ಟು ಬಲಗೊಳಿಸಲು ಆಚರಿಸುವಂತಹ ಅದ್ಭುತವಾದ ಹಬ್ಬವಾಗಿದೆ. ಈ ದಿನ ಸಹೋದರಿಯರು ತಮ್ಮ ಸಹೋದರರ ಕೈಗೆ ರಾಖಿಯನ್ನು ಕಟ್ಟುತ್ತಾರೆ ಮತ್ತು ಸಹೋದರರು ತಮ್ಮ ಸಹೋದರಿಯರಿಗೆ ಜೀವನಪೂರ್ತಿ ರಕ್ಷೆಯನ್ನು ನೀಡುವುದರೊಂದಿಗೆ ಅವರ ಪ್ರತಿ ಹೆಜ್ಜೆಯಲ್ಲಿಯೂ ಸಂಪೂರ್ಣ ಬೆಂಬಲವನ್ನು ನೀಡುವುದಾಗಿ ಮಾತನ್ನು ನೀಡುತ್ತಾರೆ. ಈ ರಕ್ಷಾ ಬಂಧನ ಹಬ್ಬವು ಶ್ರಾವಣ ಮಾಸದ ಹುಣ್ಣಿಮೆಯ ದಿನದಂದು ಪ್ರತಿ ವರ್ಷ ಆಚರಿಸಲಾಗುತ್ತದೆ. ಈ ಬಾರಿಯ ರಕ್ಷಾ ಬಂಧನ ಹಬ್ಬವು ಆಗಸ್ಟ್ 9 ರಂದು ಆಚರಿಸಲಾಗುವುದು.

ರಕ್ಷಾ ಬಂಧನದ ಶುಭ ದಿನದಂದು ಸಹೋದರಿಯರು ಸಹೋದರರ ಕೈಗೆ ರಕ್ಷೆಯನ್ನು ಕಟ್ಟುತ್ತಾರೆ. ಈ ಸಂದರ್ಭದಲ್ಲಿ ಸಹೋದರರು ತಮ್ಮ ಸಹೋದರಿಗೆ ಉಡುಗೊರೆಯನ್ನು ನೀಡುತ್ತಾರೆ. ಆದರೆ ಸಹೋದರರು ತಮ್ಮ ಸಹೋದರಿಗೆ ಉಡುಗೊರೆಯನ್ನು ನೀಡುವ ಸಮಯದಲ್ಲಿ ಕೆಲವು ವಿಚಾರಗಳ ಬಗ್ಗೆ ವಿಶೇಷವಾಗಿ ಗಮನವನ್ನು ನೀಡಬೇಕಾಗುತ್ತದೆ. ಇಲ್ಲದಿದ್ದರೆ ಅಪಶಕುನ ಅಥವಾ ಅಶುಭವಾಗುವ ಸಂಭವ ಇರುವುದು. ಹಾಗಾಗಿ ಈ ರಕ್ಷಾ ಬಂಧನದ ಶುಭ ದಿನದಂದು ಸಹೋದರರು ತಮ್ಮ ಸಹೋದರಿಗೆ ಯಾವೆಲ್ಲ ವಸ್ತುಗಳನ್ನು ಅಪ್ಪಿತಪ್ಪಿ ಉಡುಗೊರೆಯಾಗಿ ನೀಡಲೇಬಾರದು ಎಂದು ತಿಳಿದುಕೊಳ್ಳುವ ಕುತೂಹಲ ನಿಮಗಿದ್ದರೆ, ಈ ಲೇಖನವನ್ನು ತಪ್ಪದೇ ಕೊನೆಯವರೆಗೂ ಓದಿ.

ರಕ್ಷಾ ಬಂಧನದ ದಿನ ಸಹೋದರರು ತಮ್ಮ ಸಹೋದರಿಗೆ ಅಲ್ಯೂಮಿನಿಯಂ ನಿಂದ ತಯಾರಿಸಿದಂತಹ ಅಥವಾ ಅಲುಮಿನಿಯಂ ಗೆ ಸಂಬಂಧಿಸಿದ ವಸ್ತುಗಳನ್ನು ಉಡುಗೊರೆಯಾಗಿ ನೀಡಲೇಬಾರದು ಎಂದು ಹೇಳಲಾಗುತ್ತದೆ. ಏಕೆಂದರೆ ಅಲುಮಿನಿಯಂ ರಾಹು ಗ್ರಹದೊಂದಿಗೆ ಸಂಬಂಧವನ್ನು ಹೊಂದಿದೆ. ಹಾಗಾಗಿ ರಾಹು ಗ್ರಹದ ಅಶುಭ ಪ್ರಭಾವವು ನಿಮ್ಮ ಸಂಬಂಧಗಳ ಮೇಲೆ ಬೀರಬಹುದು ಎಂದು ಹೇಳಲಾಗುತ್ತದೆ. ಹಾಗಾಗಿ ಈ ರಕ್ಷಾ ಬಂಧನದಂದು ಅರ್ಪಿತಪ್ಪಿಯೂ ನೀವು ಅಲುಮಿನಿಯಂ ವಸ್ತುಗಳನ್ನು ನಿಮ್ಮ ಸಹೋದರಿಗೆ ಉಡುಗೊರೆಯಾಗಿ ನೀಡಬೇಡಿ.

ಈ ವರ್ಷದ ರಕ್ಷಾಬಂಧನ ಹಬ್ಬದಂದು ನೀವು ನಿಮ್ಮ ಸಹೋದರಿಗೆ ಯಾವುದೇ ಕಾರಣಕ್ಕೂ ಚರ್ಮದಿಂದ ತಯಾರಿಸಿದ ವಸ್ತುಗಳನ್ನು ಉಡುಗೊರೆಯಾಗಿ ನೀಡಬಾರದು ಎಂದು ಹೇಳಲಾಗುತ್ತದೆ. ಚರ್ಮದ ವಸ್ತುಗಳೆಂದರೆ ಬ್ಯಾಗ್ ಇತ್ಯಾದಿಗಳು ಸಹ ಆಗಿರಬಹುದು. ಏಕೆಂದರೆ ಚರ್ಮವು ನಕಾರಾತ್ಮಕ ಉತ್ಸಾಹವನ್ನು ಹೊಂದಿರುತ್ತದೆ ಎಂದು ಹೇಳಲಾಗುತ್ತದೆ. ಜೊತೆಗೆ ಚರ್ಮವನ್ನು ಪವಿತ್ರವಾದ ವಸ್ತು ಎಂದು ಪರಿಗಣಿಸಲಾಗುವುದಿಲ್ಲ. ಹಾಗಾಗಿ ಈ ವರ್ಷದ ರಕ್ಷಾಬಂಧನದ ಸಂದರ್ಭದಲ್ಲಿ ಸಹೋದರರು ತಮ್ಮ ಸಹೋದರಿಗೆ ಚರ್ಮದ ವಸ್ತುಗಳನ್ನು ಉಡುಗೊರೆಯಾಗಿ ನೀಡಿದರೆ, ಅವರಿಬ್ಬರ ನಡುವಿನ ಸಂಬಂಧದ ಮೇಲೆ ನಕಾರಾತ್ಮಕ ಪ್ರಭಾವ ಬೀರುವುದು. ಹಾಗಾಗಿ ಚರ್ಮದ ವಸ್ತುಗಳನ್ನು ಅಪ್ಪಿತಪ್ಪಿಯು ಉಡುಗೊರೆಯಾಗಿ ನಿಮ್ಮ ಸಹೋದರಿಗೆ ನೀಡಬೇಡಿ.

ರಕ್ಷಾಬಂಧನ ಹಬ್ಬವು ಒಂದು ಪವಿತ್ರವಾದ ಹಬ್ಬವಾಗಿದೆ. ಈ ಸಂದರ್ಭದಲ್ಲಿ ಸಹೋದರರು ಅಪ್ಪಿತಪ್ಪಿಯು ತಮ್ಮ ಸಹೋದರಿಗೆ ಚೂಪಾದ ವಸ್ತುಗಳು ಅಂದರೆ ಚಾಕು ಇತ್ಯಾದಿಗಳನ್ನು ಉಡುಗೊರೆಯಾಗಿ ನೀಡಲೇಬೇಡಿ. ಏಕೆಂದರೆ ಈ ವಸ್ತುಗಳನ್ನು ನೀವು ಉಡುಗೊರೆಯಾಗಿ ನೀಡಿದರೆ ನಿಮ್ಮ ಸಂಬಂಧದಲ್ಲಿ ನಕಾರಾತ್ಮಕತೆ ಇನ್ನಷ್ಟು ಹೆಚ್ಚಾಗುವುದು ಮತ್ತು ನಿಮ್ಮ ನಡುವಿನ ಸಂಬಂಧದಲ್ಲಿ ಬಿರುಕು ಉಂಟಾಗುವ ಸಂಭವವು ಬಹಳಷ್ಟು ವೃದ್ದಿಯಾಗುವುದು ಎಂದು ಹೇಳಲಾಗುತ್ತದೆ. ಜೊತೆಗೆ ಈ ಅವಧಿಯಲ್ಲಿ ನೀವು ಚೂಪಾದ ವಸ್ತುಗಳನ್ನು ಉಡುಗೊರೆಯಾಗಿ ನೀಡಿದರೆ ನಿಮ್ಮ ಸಹೋದರಿಯೂ ಆರ್ಥಿಕ ಸಮಸ್ಯೆಗಳನ್ನು ಸಾಕಷ್ಟು ಎದುರಿಸಬೇಕಾಗಿ ಬರಬಹುದು.

ರಕ್ಷಾ ಬಂಧನದ ಶುಭ ಸಂದರ್ಭದಲ್ಲಿ ಶನಿಗೆ ಸಂಬಂಧಿಸಿದಂತಹ ವಸ್ತುಗಳನ್ನು ನಿಮ್ಮ ಸಹೋದರಿಗೆ ಉಡುಗೊರೆಯಾಗಿ ನೀಡಬಾರದು ಎಂದು ಹೇಳಲಾಗುತ್ತದೆ. ಹಾಗಾಗಿ ಈ ದಿನ ಕಬ್ಬಿಣದ ವಸ್ತುಗಳು ಅಥವಾ ಕಬ್ಬಿಣಕ್ಕೆ ಸಂಬಂಧಿಸಿದಂತಹ ವಸ್ತುಗಳನ್ನು ನಿಮ್ಮ ಸಹೋದರಿಗೆ ಈ ರಕ್ಷಾ ಬಂಧನದ ಸಂದರ್ಭದಲ್ಲಿ ಉಡುಗೊರೆಯಾಗಿ ನೀಡಬೇಡಿ. ಏಕೆಂದರೆ ಈ ಬಾರಿಯ ರಕ್ಷಾಬಂಧನ ಹಬ್ಬ ಶನಿವಾರದ ದಿನ ಆಚರಿಸಲಾಗುತ್ತದೆ. ಹಾಗಾಗಿ ಶನಿವಾರದಂದು ಕಬ್ಬಿಣದ ವಸ್ತುಗಳನ್ನು ನೀಡುವುದರಿಂದ ಶನಿಯ ಕೋಪಕ್ಕೆ ಗುರಿಯಾಗುವಿರಿ. ಇದರಿಂದ ಶನಿ ದೇವನ ಅಶುಭ ಪ್ರಭಾವವನ್ನು ನಿಮ್ಮ ಮೇಲೆ ನೋಡಬಹುದಾಗಿದೆ. ಹಾಗಾಗಿ ಶನಿಗೆ ಸಂಬಂಧಿಸಿದ ವಸ್ತುಗಳನ್ನು ಈ ಬಾರಿಯ ರಕ್ಷಾ ಬಂಧನದ ಸಂದರ್ಭದಲ್ಲಿ ನಿಮ್ಮ ಸಹೋದರಿಗೆ ಅರ್ಪಿತಪ್ಪಿಯು ಉಡುಗೊರೆಯಾಗಿ ನೀಡಬೇಡಿ.

ಜ್ಯೋತಿಷ್ಯ ಶಾಸ್ತ್ರದ ಪ್ರಕಾರ, ಯಾವುದೇ ವ್ಯಕ್ತಿಗೆ ಉಡುಗೊರೆಯನ್ನು ನೀಡುವ ಸಂದರ್ಭದಲ್ಲಿ ಕರವಸ್ತ್ರವನ್ನು ಎಂದಿಗೂ ಉಡುಗೊರೆಯಾಗಿ ನೀಡಬಾರದು ಎಂದು ಹೇಳಲಾಗುತ್ತದೆ. ಏಕೆಂದರೆ ಈ ಉಡುಗೊರೆಯಿಂದ ಸಂಬಂಧದಲ್ಲಿ ಬಿರುಕು ಉಂಟಾಗುವುದು ಎಂದು ಹೇಳುವರು. ಹಾಗಾಗಿ ಈ ರಕ್ಷಾ ಬಂಧನದ ಶುಭ ಸಂದರ್ಭದಲ್ಲಿ ನಿಮ್ಮ ಸಹೋದರಿಗೆ ಅರ್ಪಿತಪ್ಪಿಯು ಕರವಸ್ತ್ರ ಅಥವಾ ಅದಕ್ಕೆ ಸಂಬಂಧಿಸಿದಂತಹ ವಸ್ತುಗಳನ್ನು ಉಡುಗೊರೆಯಾಗಿ ನೀಡಲೇಬೇಡಿ. ಈ ವರ್ಷದ ರಕ್ಷಾ ಬಂಧನದಂದು ನಿಮ್ಮ ಸಹೋದರಿಗೆ ಯಾವ ವಸ್ತುವನ್ನು ಉಡುಗೊರೆಯಾಗಿ ನೀಡಬೇಕೆಂದು ನೀವು ಯೋಚಿಸುತ್ತಿದ್ದರೆ, ಇಲ್ಲಿ ಹೇಳಿರುವಂತಹ ಎಲ್ಲಾ ವಸ್ತುಗಳನ್ನು ಉಡುಗೊರೆಯಾಗಿ ಎಂದಿಗೂ ನೀಡಬೇಡಿ. ಇದರಿಂದ ನಕಾರಾತ್ಮಕತೆ ಸಾಕಷ್ಟು ಹೆಚ್ಚಾಗಬಹುದು ಎಂದು ಹೇಳಲಾಗುತ್ತದೆ. ಆದರೂ ನೀವು ಈ ವಸ್ತುಗಳನ್ನು ಉಡುಗೊರೆಯಾಗಿ ನಿಮ್ಮ ಸಹೋದರಿಗೆ ನೀಡಿದರೆ, ನಿಮ್ಮಿಬ್ಬರ ನಡುವಿನ ಸಂಬಂಧದಲ್ಲಿ ಬಿರುಕು ಉಂಟಾಗಬಹುದು ಎಂದು ಹೇಳಲಾಗುತ್ತದೆ.

ಅಣ್ಣ ತಂಗಿಯ ಜೀವನದ ಒಂದು ಉತ್ತಮ ಪ್ರೀತಿಯ ಸಂಕೇತ ಒಬ್ಬರನ್ನು ಪರಸ್ಪರ ರಕ್ಷಣೆ ಮಾಡುವ ಮನಸ್ತಾಪವನ್ನು ಹೊಂದಿರುತ್ತಾರೆ. ರಕ್ಷಾ ಬಂಧನ ಪ್ರಾಚೀನ ಕಾಲದಿಂದ ಬಹಳ ಪ್ರಾಮುಖ್ಯತೆ ಹೊಂದಿದೆ

ಭಾರತೀಯರು ಶ್ರಾವಣ ಮಾಸದಲ್ಲಿ ಆಚರಿಸುವ ಒಂದು ಹಬ್ಬ. ಆ ದಿನ ಸಹೋದರಿಯರು ತಮ್ಮ ಸಹೋದರನ ಮುಂಗೈಗೆ ರಾಖಿಯನ್ನು ಕಟ್ಟಿ ಆರತಿ ಮಾಡಿ, ಸೋದರನ ಆಶೀರ್ವಾದವನ್ನು ಬೇಡುತ್ತಾರೆ. ತಂಗಿಯ ರಕ್ಷಣೆ ಅಣ್ಣನಿಂದ, ಅಣ್ಣನ ರಕ್ಷಣೆ ತಂಗಿಯಿಂದ ಎಂಬ ಪರಸ್ಪರ ಭ್ರಾತೃತ್ವದ ಭಾವನೆಯನ್ನು ದಟ್ಟಗೊಳಿಸುವ ಹಬ್ಬ ಇದಾಗಿದೆ.1

ಭಾರತದಲ್ಲಿ ಶ್ರಾವಣ ಮಾಸದ ಹುಣ್ಣಿಮೆಯನ್ನು ಯಜುರ್ ಉಪಕರ್ಮ ಎಂದು ಹಿಂದಿನಿಂದ ಆಚರಿಸುತ್ತಿದ್ದಾರೆ. ಈ ದಿನಕ್ಕೆ ಮತ್ತೊಂದು ವಿಶೇಷವಿದೆ. ಮುಂಚೆ ಉತ್ತರ ಭಾರತದಲ್ಲಿ ಮಾತ್ರ ಹೆಚ್ಚು ಪ್ರಚಲಿತವಿದ್ದ ಟಿರಕ್ಷಾಬಂಧನಟಿ ಅಥವಾ ಟಿರಾಖಿಟಿ ಹಬ್ಬವನ್ನು ಇತ್ತೀಚಿನ ವರ್ಷಗಳಲ್ಲಿ ಭಾರತದಾದ್ಯಂತ ಎಲ್ಲರೂ ಆಚರಿಸುತ್ತಾರೆ. ಆದರೆ ಅಣ್ಣ ತಂಗಿಯರ ಬಾಂಧವ್ಯವನ್ನು ಪ್ರತಿಯೊಬ್ಬರೂ ಭಾವನಾತ್ಮಕವಾಗಿ ಸ್ಮರಿಸುವ ಈ ದಿನ ಬಾಲ್ಯದ ಅನೇಕ ಸಿಹಿ ಕಹಿ ನೆನಪುಗಳನ್ನು ನಮ್ಮ ಮನದಲ್ಲಿ ಮೂಡಿಸುತ್ತದೆ.

ರಕ್ಷಾ ಬಂಧನ ಆಚರಣೆಗೆ ಭಾರತೀಯ ಸಂಸ್ಕೃತಿಯಲ್ಲಿ ತನ್ನದೇ ಆದ ಮಹತ್ವವಿದೆ. ಪ್ರತಿಯೊಬ್ಬ ಸಹೋದರಿಯು ಸಮಾಜದ ದುಷ್ಟಶಕ್ತಿಗಳಿಂದ ರಕ್ಷಿಸೆಂದು ತನ್ನ ಸಹೋದರನ ಮುಂಗೈಗೆ ರಾಖಿಯನ್ನು ಕಟ್ಟುತ್ತಾಳೆ. ಪ್ರತಿಯೊಬ್ಬ ಸಹೋದರನೂ ಈ ಸಮಯದಲ್ಲಿ ಸಹೋದರಿಯೆಡೆಗೆ ತನ್ನ ಭ್ರಾತತ್ವ ಪ್ರೇಮವನ್ನು ಉಜ್ವಲಗೊಳಿಸಬೇಕೆಂಬುದು ರಕ್ಷಾಬಂಧನ ಹಬ್ಬದ ನೀತಿಯಾಗಿದೆ

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248